# ಕ್ಷಮೆಗೆ ದುಡ್ಡಿನ ಒಪ್ಪಿಗೆಯುಂಟೆ?

'ಈ ಸೃಷ್ಟಿಯನ್ನು ಉಂಟು ಮಾಡಿದ ಕರ್ತಾರನ ಜ್ಞಾನಕ್ಕೆ ದ್ರೋಹ ಬಗೆದ ಪಾಪವನ್ನು ನಾನು ಮಾಡಿದ್ದೇನೆ. ನನ್ನ ಪಾಪಕ್ಕೆ ತಕ್ಕ ಶಿಕ್ಷೆಯನ್ನೂ– ಪ್ರಾಯಶ್ಚಿತ್ತವನ್ನೂ ಅನುಭವಿಸಿದ್ದೇನೆ. ನಾನು ಕರ್ತಾರನ ಈ ಕೆಲಸವನ್ನು ಅಂದರೆ ಸೃಷ್ಟಿಯನ್ನು ಸುಧಾರಿಸಲು ಬಯಸಿದ್ದೆ. ಈ ಸೃಷ್ಟಿಯೇನೋ ಅದ್ಭುತವಾಗಿದೆ. ಜೀವಂತವಾಗಿದೆ. ನವೋನವವಾಗಿದೆ. ಸೃಷ್ಟಿಯನ್ನು ಹೀಗೆ ರೂಪಿಸುವಲ್ಲಿ ಆಶ್ಚರ್ಯಕರವಾದ ಅನೇಕಾನೇಕ ನಿಯಮಗಳು ಕೆಲಸ ಮಾಡುತ್ತಿವೆ. ಹೀಗಿರುತ್ತ, ಈ ನಿಯಮಗಳ ಸಂಬಂಧ ಸರಣಿಯಲ್ಲಿ ಎಲ್ಲೋ ಏನೋ ಒಂದು ಕೊಂಡಿ ಕಳೆದುಹೋಗಿದೆ; ಎಲ್ಲೋ ಏನೋ ಒಂದು ತಪ್ಪಾಗಿದೆ ಎಂದು ನಾನು ಬಾವಿಸಿದ್ದೆ. ಕಳೆದು ಹೋದ ಆ ಕೊಂಡಿಯನ್ನು ನಾನು ಪೂರೈಯಿಸಬಲ್ಲೆನೆಂದೂ ಭಾವಿಸಿದ್ದೆ. ನಾನು–ದುರ್ಬಲ; ಅಸಮರ್ಥ, ಕ್ರಿಮಿಕೀಟಗಳಿಗಿಂತ ಏನೂ ಹೆಚ್ಚಲ್ಲದ ಮನುಷ್ಯನಾದ ಈ ನಾನು– ಕರ್ತಾರನ ಸೃಷ್ಟಿಯನ್ನು ಸುಧಾರಿಸಬಲ್ಲೆನೆಂದು ಭಾವಿಸಿದ್ದೆ.'

ಒಂದು ಕಾಲದ ತನ್ನ ಚಿಂತನೆಯು, ತನ್ನ ವಿಶಿಷ್ಟಕೊಡುಗೆ ಎಂದೇ ಪರಿಗಣಿಸಲ್ಪಟ್ಟಿದ್ದ ತನ್ನ ಖ್ಯಾತಿಗೆ ಕಾರಣವಾದ ಚಿಂತನೆಯು ತಪ್ಪೆಂದು ತನಗೇ ಕಂಡುಬಂದು ಭ್ರಮನಿರಸನವಾದ ಹೊತ್ತಿನಲ್ಲಿ ಆಡಿದ ಮಾತುಗಳಿವು. ತಮ್ಮ ಧೋರಣೆ ತಪ್ಪೆಂದು ಪಶ್ಚಾತ್ ಕಂಡುಬಂದವರು ಬಹುಮಂದಿ ಇರಬಹುದು. ಆದರೆ ಲೋಕದ ಮುಂದೆ ಅದನ್ನೊಪ್ಪಿಕೊಳ್ಳುವ ಪ್ರಾಂಜಲತೆ ಇರುವವರು ಎಲ್ಲ ಕ್ಷೇತ್ರಗಳಲ್ಲಿಯೂ ವಿರಳ. ಹೀಗೆ ಆಳವಾಗಿ ತನ್ನ ತಪ್ಪನ್ನು ಒಪ್ಪಿಕೊಂಡು ಓರ್ವ ತತ್ವಜ್ಞಾನಿಯಂತೆ ಹೃದಯಸ್ಪರ್ಶಿಯಾದ ಕ್ಷಮಾಯಾಚನೆ ಮಾತುಗಳನ್ನು ಆಡಿದವನು 'ಲೈಬಿಗ್' (Justus von licbig) ಎಂಬ ರಸಾಯನಶಾಸ್ತ್ರ ವಿಜ್ಞಾನಿ!

ಲೈಬಿಗ್ 19 ಶತಮಾನದಲ್ಲಿ ಬದುಕಿದ್ದವನು. ಮೂಲತಃ ರಸಾಯನ– ಶಾಸ್ತ್ರದ ವಿದ್ಯಾರ್ಥಿ. ಈ ಶಾಸ್ತ್ರದ ಅಧ್ಯಯನದಿಂದ ತಾನು ಪಡೆದುಕೊಂಡ ತಿಳಿವಳಿಕೆಯನ್ನು ಕೃಷಿಯಲ್ಲಿ ಪ್ರಯೋಗ ಮಾಡಿ ಪರಿಣಾಮಗಳನ್ನು ಅಧ್ಯಯನ ಮಾಡುವುದೇ ಲೈಬಿಗ್ ಕಾರ್ಯಕ್ಷೇತ್ರವಾಗಿತ್ತು. ಏಕೆಂದರೆ ಅವನ ಕಾಲದಲ್ಲಿ ಕೃಷಿ ವಿಜ್ಞಾನವು ರಸಾಯನ ಶಾಸ್ತ್ರದ ಭಾಗವೇ ಆಗಿತ್ತು. ತನ್ನ ಪ್ರಯೋಗಗಳ ಮೂಲಕ ಲೈಬಿಗ್ ಕಂಡುಕೊಂಡ ಒಂದು ಮುಖ್ಯ ತಥ್ಯವೆಂದರೆ– ಒಂದು ಸಸ್ಯದ ಬೆಳವಣಿಗೆಗೆ ಏನೆಲ್ಲ ಪೋಷಕಾಂಶಗಳು ಅಗತ್ಯವೆಂದು ತಿಳಿಯ ಬೇಕಾದರೆ ಆ ಸಸ್ಯದ 'ಬೂದಿ'ಯನ್ನು ಪ್ರಯೋಗಶಾಲೆಯಲ್ಲಿ ಆಳವಾಗಿ ಪರಿಶೀಲಿಸಬೇಕು. ಆಗ ಸಿಗುವ ಮಾಹಿತಿಯು ಅಧಿಕೃತ.

ಮಣ್ಣಿನಲ್ಲಿರುವ ಸಾವಯವ ಪದಾರ್ಥಗಳೇ ಸಸ್ಯದ ಬೆಳವಣಿಗೆಗೆ ಮುಖ್ಯ ಕಾರಣವೆನ್ನುವಂತಿಲ್ಲ– ಏಕೆಂದರೆ ಸಾವಯವ ವಸ್ತುಗಳು ಬೂದಿಯಂತೆ ನೀರಿನಲ್ಲಿ ಕರಗದೆ ಇರುವುದರಿಂದ ಅವು ಮಣ್ಣನ್ನು ಸೇರಿ ಸಸ್ಯಗಳ ಬೆಳವಣಿಗೆಗೆ ಬೇಕಾದುದನ್ನು ಒದಗಿಸುವುದು ಸಂದೇಹಾಸ್ಪದ. ಸಸ್ಯದ ಬೂದಿಯನ್ನು ಪರಿಶೀಲಿಸಿದರೆ ಅದರಲ್ಲಿ ಮುಖ್ಯವಾಗಿ ಮೂರು ಅಂಶಗಳು ಲೈಬಿಗ್‌ನಿಗೆ ಕಂಡುಬಂದುವು. ಅವು, ನೈಟ್ರೋಜನ್, ಪಾಸ್ಪರಸ್ ಮತ್ತು ಪೊಟ್ಯಾಶ್. ಇವೇ 'ಎನ್‌ಪಿಕೆ' ಎಂದು ಆಮೇಲೆ ವಿಶ್ವದಾದ್ಯಂತ ಪ್ರಸಿದ್ಧವಾದವು. ಈ ಮೂರು ಬೂದಿಗಳನ್ನು ಕೃತಕವಾಗಿ ತಯಾರಿಸಿ ಮಣ್ಣಿನ ಮೂಲಕ ನೇರವಾಗಿ ಗಿಡಗಳಿಗೆ ಉಣ್ಣಿಸಿದರೆ ಗಿಡ ಅದ್ಭುತವಾಗಿ ಬೆಳೆಯುವುವು ಎಂದು ಲೈಬಿಗ್ ಪ್ರತಿಪಾದಿಸಿದ. ಈ ಪ್ರಯೋಗಗಳನ್ನು ವ್ಯವಹಾರಿಕವಾಗಿ ತೋರಿಸಿ ಯಶಸ್ವಿಯೂ ಆದನು. ಹೀಗೆ ಎನ್‌ಪಿಕೆ ಸಿದ್ಧಾಂತದ ಜೊತೆಗೆ ಲೈಬಿಗ್ ಹೆಸರು ಶಾಶ್ವತವಾಗಿ ಸೇರಿಹೋಯಿತು, ಅಲ್ಲದೆ, ಮಣ್ಣಿನಲ್ಲಿರುವ ಸಾವಯವ ಪದಾರ್ಥಗಳೇ ಸಸ್ಯದ ಬೆಳವಣಿಗೆಗೆ ಮುಖ್ಯವಾಗಿರುವಂಥದು ಎಂದು ಕೃಷಿ ಸಂಸ್ಕೃತಿಯಲ್ಲಿ ಅದುವರೆಗೆ ಎಲ್ಲೆಡೆ ನಂಬಲಾಗಿತ್ತು. ಈ ಸಾವಯವ ಸಿದ್ಧಾಂತವನ್ನು ಲೈಬಿಗ್ ಬಲವಾಗಿ ಅಲ್ಲಗಳೆದನು. ತನ್ನ ಹೊಸ ಸಿದ್ಧಾಂತವನ್ನು ಸ್ಥಾಪಿಸಿದನು.

ಆದರೆ ಲೈಬಿಗ್ ಮಾಡಿದ ಪ್ರಯೋಗಗಳಲ್ಲಿ ಅನೇಕ ಪ್ರಮಾದಗಳಿದ್ದವು. ಸಾವಯವ ಸಿದ್ಧಾಂತವನ್ನಲ್ಲಗಳೆದು ಎನ್‌ಪಿಕೆ ಸಿದ್ಧಾಂತವನ್ನು ಒಪ್ಪಿಕೊಳ್ಳಬೇಕಾದರೆ, ಸಾವಯವ ಧಾರಾಳವಾಗಿರುವ ಭೂಮಿಯ ಮೇಲ್ಪದರದ ಮಣ್ಣನ್ನು ಬೇರ್ಪಡಿಸಿ, ಕೆಳಪದರದ ಮಣ್ಣಿನಲ್ಲಿ ಮಾತ್ರ ಈ ಪ್ರಯೋಗವನ್ನು ನಡೆಯಿಸಬೇಕಾಗಿತ್ತು. ಬಹು ಮುಖ್ಯವಾದ ಈ ಅಂಶವನ್ನು ಗಮನಿಸಿರಲಿಲ್ಲ. ಅಲ್ಲದೆ ಲೈಬಿಗ್ ಓರ್ವ ಪ್ರತಿಭಾವಂತ ವಿಜ್ಞಾನಿಯಾಗಿ ಪ್ರಯೋಗಶಾಲೆಯಲ್ಲಿಯೇ ತನ್ನ ಸಮಯವನ್ನು ಕಳೆಯುವವನಾಗಿದ್ದನಲ್ಲದೆ, ತನ್ನ ಗದ್ದೆ–ತೋಟಗಳಲ್ಲಿ ದಿನವಿಡೀ ಗೇಯುವ, ಗಮನಿಸುವ ಕೃಷಿಕನಾಗಿರಲಿಲ್ಲ. ಅಂದರೆ ಸಸ್ಯಗಳ ಜೊತೆ, ಮಣ್ಣಿನ ಜೊತೆ, ಒಂದರೊಡನೆ ಇನ್ನೊಂದರ ಸಂಬಂಧ ಹೊಂದಿದ ಇಡಿಯ ನಿಸರ್ಗದ ಜೊತೆ ಲೈಬಿಗ್‌ಗೆ ಜೀವಂತವಾದ ಸಂಬಂಧವೇ ಇರಲಿಲ್ಲ. ಅವನಿಗೆ ಸದಾ ಸಸ್ಯಗಳ ಬೂದಿಯ ಚಿಂತೆ!

ನಮ್ಮ ಅಲ್ಲಮ, 'ಮರದೊಳಗಣ ಮಂದಾಗ್ನಿ' ಎನ್ನುತ್ತಾನೆ! ಒಂದು ಮರವನ್ನು ಹಸಿರೆಲೆಗಳಿಂದ ನಳನಳಿಸುವಂತೆ ಮಾಡಿದ, ಹೂ–ಹೀಚು–ಕಾಯಿ– ಹಣ್ಣುಗಳಿಂದ ತೂಗುವಂತೆ ಮಾಡಿದ 'ಜೀವ–ಶಕ್ತಿ' ಆ ಮರದೊಳಗೆ ಮರದಾಗ್ನಿಯಾಗಿದೆ ಎನ್ನುತ್ತಾನೆ. ಅದು ಅಗ್ನಿಯೇ ಆದರೂ, ಸುಡಬಲ್ಲದ್ದೇ ಆದರೂ, ಅದು ಮರದ ಒಳಗಡೆ ಇರುವುದರಿಂದ, ಸುಡಬಲ್ಲ ಅಗ್ನಿಯೇ ಮರದ ಜೀವಂತಿಕೆಗೆ ಕಾರಣವಾಗಿ ಹಸಿರು ಹೊಮ್ಮಿಸುತ್ತಿದೆ– ಎನ್ನುತ್ತಾನೆ. ಅಲ್ಲಮನದು ಬೂದಿಯನ್ನು ತಡಕುವ ಉಪಕ್ರಮವಲ್ಲ. ಒಳಗಿನ ಬೆಂಕಿಯನ್ನೇ ಅರಿಯುವ ಜ್ಞಾನ–ಮೀಮಾಸೆ!

ಲೈಬಿಗ್ ಪ್ರಯೋಗಗಳಲ್ಲಿ ಅಡಗಿದ್ದ ಪ್ರಮಾದಗಳು ಮುಂದೆ ವಿಜ್ಞಾನ ಬೆಳೆದಂತೆ ಬೆಳಕಿಗೆ ಬಂದವು. ಸಾವಯವ ಮಹತ್ವ, ಮಣ್ಣಿನಲ್ಲಿರುವ ಕೋಟ್ಯಂತರ ಸೂಕ್ಷ್ಮಾಣು ಜೀವಿಗಳ ಪ್ರಾಮುಖ್ಯ, ನಿಸರ್ಗದ ಜೀವಜಾಲದ ಅರಿವು– ಇವೆಲ್ಲ ತಿಳಿಯತೊಡಗಿದಂತೆ, ಲೈಬಿಗ್‌ಗೆ ತನ್ನ ತಪ್ಪು ಅರಿವಾಗತೊಡಗಿತು. ಮನಸ್ಸು ತಿಳಿಯಾದಂತೆ ಅಪರಾಧೀಭಾವ ಚುಚ್ಚತೊಡಗಿತು. ಜೀವಂತ ಸಸ್ಯವೊಂದನ್ನು ಅದರ ಜೀವಂತ ಸನ್ನಿವೇಶದಲ್ಲಿಯೇ ಅರಿಯಲಾಗದಿದ್ದುದಕ್ಕೆ ವ್ಯಥೆಯಾಯಿತು. ಅಂಥ ಸಂದರ್ಭದಲ್ಲಿ, ಲೈಬಿಗ್ ನೀಡಿದ ಹೇಳಿಕೆ– ಈ ಲೇಖನದ ಮೊದಲಲ್ಲಿ ಇರುವಂಥದು.

ಆದರೆ ಏನಾಯಿತೆಂದರೆ– ಲೈಬಿಗ್ ಹೇಳಿಕೆ, 1899ರ 'ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ'ದಲ್ಲಿ ಪ್ರಕಟವಾಯಿತು. ಹಾಗೆ ಪ್ರಕಟವಾದುದರಿಂದಲೇ ಅದು, ಈಗಲೂ ದೊರಕುತ್ತಿರುವುದು. ಆದರೆ, ಬ್ರಿಟಾನಿಕಾದ ಮುಂದಿನ ಆವೃತ್ತಿಗಳಲ್ಲಿ ಲೈಬಿಗ್‌ನ ಈ ಮಹತ್ವ ಪೂರ್ಣ ಹೇಳಿಕೆಯನ್ನು, ಅವನ ತಪ್ಪೊಪ್ಪಿಗೆಯನ್ನು, ಪ್ರಕಟವಾಗದಂತೆ ನೋಡಿಕೊಳ್ಳಲಾಯಿತು! ಹಾಗೆ ನೋಡಿಕೊಳ್ಳುವುದರಲ್ಲಿ ಎಲ್ಲರೂ ಯಶಸ್ವಿಯಾದರು! ಏಕೆಂದರೆ, ಅಷ್ಟರಲ್ಲಾಗಲೇ ಎನ್‌ಪಿಕೆ ಬೂದಿಗಳನ್ನು ನಿರಂತರ ಉತ್ಪಾದನೆ ಮಾಡತಕ್ಕ ಸಾವಿರಾರು ಕಾರ್ಖಾನೆಗಳು ಯೂರೋಪಿನಾದ್ಯಂತ ಕೆಲಸ ಮಾಡುತ್ತಿದ್ದವು. ಕಾರ್ಖಾನೆಗಳ, ಕೈಗಾರಿಕೆಗಳ ಭವಿಷ್ಯವನ್ನು ಆಡಳಿತಗಳು ನೋಡಿಕೊಳ್ಳಬೇಕಾಗಿತ್ತು. ಮಣ್ಣಿನ ಭವಿಷ್ಯದ ಕುರಿತು ಯಾರು ಚಿಂತಿಸುವರು?

ಲೋಕದ ಮುಂದೆ ಕ್ಷಮಾಯಾಚನೆಯ ಮಾತುಗಳನ್ನೂ ಹೇಳುವಂತಿಲ್ಲ. ಹೇಳಬೇಕಾದರೆ ಅದಕ್ಕೆ ದುಡ್ಡಿನ ಒಪ್ಪಿಗೆ ಬೇಕು! ದೇವರು ಕ್ಷಮಿಸುವುದಿಲ್ಲ ಎಂಬ ಮಾತಿದೆ. ಅದು ನಿಜವಲ್ಲ. ದುಡ್ಡು ಕ್ಷಮಿಸುವುದಿಲ್ಲ ಎನ್ನುವುದು ಮಾತ್ರ ನಿಜ. ಅಥವಾ ಕ್ಷಮೆಯಿಂದ ಲಾಭವಿದ್ದರೆ ಮಾತ್ರ ದುಡ್ಡು ಕ್ಷಮಿಸಬಹುದೇನೋ. ಮನುಷ್ಯರ ಅಂತಃಕರಣದಲ್ಲಿಯೂ 'ಬೂದಿ ಸಿದ್ಧಾಂತ' ಗೆದ್ದುಬಿಟ್ಟಿದೆ!

■ ತೋಪ

## ಮಾತೇ ಮುತ್ತು

★ ಯಾರೂ ನಮ್ಮನ್ನು ಹೊಗಳುವುದಿಲ್ಲ ಎನ್ನುವುದು ಗೊತ್ತಿದ್ದೂ ಸರಿಯಾದ ಕೆಲಸವನ್ನು ಮಾಡುವುದು ನಿಜವಾದ ಭಾವೈಕ್ಯ.

–ಓಪ್ರಾ ವಿನ್‌ಫ್ರೇ

★ ಋಣಾತ್ಮಕ ಮನಸ್ಸು ಇಟ್ಟುಕೊಂಡು ಗುಣಾತ್ಮಕ ಬದುಕು ನಡೆಸಲು ಸಾಧ್ಯವಿಲ್ಲ.

–ಜಾಯ್ಸ್ ಮೇಯರ್

★ ಇತರರ ಸಂಕಟವನ್ನು ಬಯಸುವ ಜನರಿಗಿಂತ ತಮ್ಮ ಸಂತೋಷವನ್ನು ಬಯಸುವ ಜನರ ಸಂಖ್ಯೆ ಹೆಚ್ಚಾದರೆ ಶೀಘ್ರವೇ ಜಗತ್ತಿನಲ್ಲಿ ಸ್ವರ್ಗ ಸೃಷ್ಟಿ ಆಗುತ್ತದೆ.

–ಬರ್ಟ್ರೆಂಡ್ ರಸೆಲ್

★ ಜೀವನಪೂರ್ತಿ ಸಂತೋಷವಾಗಿರುವುದು ಎಂದರೆ ಭೂಮಿಯ ಮೇಲೆ ನರಕವನ್ನು ಅನುಭವಿಸುವುದು ಎಂದೇ ಅರ್ಥ.

–ಜಾರ್ಜ್ ಬರ್ನಾರ್ಡ್ ಷಾ

★ ತಪ್ಪುಗಳನ್ನು ಮಾಡುವ ಅವಕಾಶ ಇಲ್ಲದ ಸ್ವಾತಂತ್ರ್ಯ ಬೆಲೆಬಾಳುವಂತಹದ್ದಲ್ಲ.

–ಮಹಾತ್ಮ ಗಾಂಧಿ